ಮೇಲೆ ಇನ್ನೊಂದೆರೆಡು ಬಿಸಿ ಬಿಸಿ ಕಜ್ಜಾಯ ಬಿದ್ದವು. ಸೀದಾ ಅಲ್ಲಿಂದ ಮಳೆಯಲ್ಲೇ ಮನೆ ಕಡೆಗೆ ದರದರ ಎಳೆದುಕೊಂಡು ಹೊರಟಳು. ಗಣಿ, 'ಅಲ್ಲೋ ಕೆರಿ ತುಂಬಿ ಹರಿತೈತಿ, ನನ್ನಾರೂ ಕರಿಯೋದಲ್ಲೇನೋ... ನಾನಾರೂ ಜೊತೀಗ್ ಬರ್ತಿದ್ದೆ...' ಅಂದ. ಸುಸ್ವರ ಅಳೋದೊಂದು ಬಿಟ್ಟು ಇನ್ನೇನೂ ಮಾತಾಡಲಿಲ್ಲ.

ಮನೆಗೆ ಬಂದ ಮೇಲೆ, ಮಳೇಲಿ ನೆಂದ ಸುಸ್ವರನ ಬಟ್ಟೆ ತೆಗೆದು, ಒಗೆಯಲು ಹಾಕಿ, ಒಣ ಬಟ್ಟೆ ತೊಡಿಸಿ, ತಲೆ ಒರೆಸಿದಳು. ಕುಂಡಿಯ ಮೇಲೆ ಕೆಂಪಗೆ ಗೆರೆ ಎಳೆದಂತೆ ಬಾಸುಂಡೆಗಳು ಮೂಡಿದ್ದವು. ಮೆತ್ತಗೆ ಅವನ್ನು ಸವರಿದಳು. ಬರಸೆಳೆದು ಅವನನ್ನು ತಬ್ಬಿದಳು. ಲೊಚ ಲೊಚ ಮುತ್ತಿಟ್ಟಳು. ಮತ್ತೆ ಹೀಗೆಂದೂ ತನಗೆ ಹೇಳದೆ ಕೇಳದೆ ಹೋಗಬಾರದೆಂದು ತಾಕೀತು ಮಾಡಿದಳು. ನಂತರ ಬಿಸಿ ಬಿಸಿ ಕಷಾಯ ಮಾಡಿ ಕುಡಿಸಿ, ಸುಮಾರು ಹೊತ್ತು ಅವನ ಕೂದಲಲ್ಲಿ ಬೆರಳಾಡಿಸುತ್ತಾ ಮುದ್ದುಗರೆಯುತ್ತಾ ಅವನನ್ನು ಮಲಗಿಸಿದಳು. ಅಷ್ಟು ಹೊತ್ತಿಗೆ ಸಂಜೆ ನಾಲ್ಕಾಗಿತ್ತು.

ಐದರ ಹೊತ್ತಿಗೆಲ್ಲಾ ಮಾಧವ ಕೊಡೆ ಹಿಡಿದು ಮನೆಗೆ ಬಂದ. ಕೊಡೆಯನ್ನು ಜಗುಲಿಯ ಮೂಲೆಯಲ್ಲಿಟ್ಟು, 'ಪ್ರತಿಮಾ ಚಾ ತಾರೇ' ಎನ್ನುತ್ತಾ ತನ್ನ ಕೋಣೆಗೆ ನಡೆದ. ಹಿಂದೆಯೇ ಪ್ರತಿಮಾ ಚಾ ಹಿಡಿದು ಹೊರಟಳು. ಅಷ್ಟು ಹೊತ್ತಿಗೆ ಅವ ಬಟ್ಟೆ ಬದಲಿಸಿ ಹಾಸಿಗೆಯ ಮೇಲೆ ಉರುಳಿದ್ದ. ಚಾ ತಂದಾಗ, ನಿಧಾನವಾಗಿ ಎದ್ದು ಕೂತ. ಅವನ ಮಾತಿಗಾಗಿ ಪ್ರತಿಮಾ ಕಾದಳು. ಅವ, 'ನಾಳೆ ಆಸ್ಪತ್ರಿಗೆ ಹೋಗ್ಬೇಕು. ನೀನೂ ಬಾ ನನ್ ಜೊತಿಗೆ...' ಅಂದ. ಅಷ್ಟಕ್ಕೇ ಅವಳಿಗೆ ಅತೀವ ಖುಷಿಯಾಯಿತು. ಸರಿ ಎಂದು ಹೇಳಿ, ಅವನ ಚಾ ಕುಡಿದ ಕಪ್ ತೆಗೆದುಕೊಂಡು ಅಡುಗೆ ಮನೆಗೆ ನಡೆದಳು. ಮಾಧವ ಅವಳಲ್ಲಾದ ಬದಲಾವಣೆಯನ್ನು ಗುರುತಿಸಿದ. ಎಂಥದೋ ಗಾಢ ನಿರಾಸೆಯೊಂದು ಅವನ ತುಟಿಗಳನ್ನು ಆವರಿಸಿ ಕೊಂಕಿಸಿತು. ಕೊರಳ ನರಗಳು ಬಿಗಿದು ಉಬ್ಬಿಕೊಂಡದ್ದು ಪ್ರತಿಮಾಳ ಗಮನಕ್ಕೆ ಬರಲಿಲ್ಲ. ಅವಳಾಗಲೆ ಮೆಟ್ಟಲು ಇಳಿದು ಅಡುಗೆ ಮನೆ ಸೇರಿಯಾಗಿತ್ತು.

ನಾಳೆ ಮಾಡಬೇಕಾದ ತನ್ನ ಪಾಲಿನ ಕೆಲಸಗಳನ್ನು ಇಂದೇ ಮಾಡಿ ಮುಗಿಸುವ ಧಾವಂತ ಹೊತ್ತು ಅವಿಶ್ರಾಂತಳಾಗಿ ಮಾಡಿಯೇ ಮಾಡಿದಳು. ಅವಳೆಂದೂ ರಾಜಿಯ ಜೊತೆ ಒಂತು ಮಾಡಿದವಳಲ್ಲ. ಕೆಲಸಗಳ್ಳಿಯಂತೂ ಮೊದಲೇ ಅಲ್ಲ. ಅಕ್ಕನಿಗೆ ಕಷ್ಟವಾಗುತ್ತದೆಂದರೆ ಎರಡು ಕೆಲಸ ಹೆಚ್ಚೇ ಮಾಡುವಂಥವಳು. ಅದರಲ್ಲೂ ರಾಜಿಗೆ ಗರ್ಭಕೋಶದ ಆಪ್ರೇಶನ್ ಆದ ಮೇಲಂತೂ ಅವಳಿಗೆ ಯಾವ ಗಟ್ಟಿ ಕೆಲಸವನ್ನೂ ಮಾಡಲು ಬಿಡುತ್ತಲೇ ಇರಲಿಲ್ಲ. ಇವಳು ಹೀಗೆ ಕಷ್ಟ ಪಡುವುದನ್ನು ನೋಡುವಾಗ ರಾಜಿ, 'ನೀ ಯಾವ್ದೋ ಜನ್ಮದಾಗ ನನ್ ಮಗಳಾಗಿದ್ದೆ ಕಾಣ್ತತಿ... ಅದ್ಕ ಇಷ್ಟೆಲ್ಲಾ ಮಾಡ್ತಿ... ಇನ್ನೊಂದು ಜನ್ಮ ಅಂತ ಇದ್ರ ನೀನ ನನ್ ತಂಗಿ ಆಗಿ ಹುಟ್ಬೇಕ್ ನೋಡು...' ಅನ್ನುತ್ತಿದ್ದಳು ರಾಜಿ. ಮಧ್ಯಾಹ್ನ ಉಂಡ ತಟ್ಟೆ ಪಾತ್ರೆಗಳನ್ನೆಲ್ಲಾ ಬೆಳಗಿಕೊಂಡು ಬಂದ ರಾಜಿಗೆ, 'ಅಕ್ಕ ಇವ್ರು ನಾಳೆ ಆಸ್ಪತ್ರಿಗೆ ಹೋಗೋಣಂತ ಕರ್ದಾರ' ಅಂದಳು. 'ಹೋಗ್ಲಿ ಬಿಡು ಈ ನೆಪದಲ್ಲಾರೂ ನಿನ್ ಗಂಡ ಎಲ್ಲೋ ಹೊರಗೆ ನಿನ್ ಕರ್ಕ ಹೊಂಟಾನಲ್ಲ... ಅಷ್ಟ್ ಸಾಕು...' ಅಂತ ಸಮಾಧಾನದ ಮಾತಾಡಿದಳು ರಾಜಿ. ಇಬ್ಬರ ಮನಸಿಗೂ ಸಮಾಧಾನವಾಗಿತ್ತು.

ಮೇಲೆ ಕೋಣೆಯೊಳಗೆ ಮಲಗಿದ್ದ ಸುಸ್ವರ ಜೋರು ಸೀನತೊಡಗಿದ್ದ. ಹೋಗಿ ನೋಡಿ ಹಣೆ ಮೇಲೆ ಕೈಯಿಟ್ಟಳು. ಮೈ ಬಿಸಿಯಾಗಿತ್ತು. ಮಂಪರಿನಲ್ಲಿ ಮುಲುಗುತ್ತಾ 'ಯಪ್ಪಲ್ಲೇ' ಎಂದು ಅರಚಿದ ಸುಸ್ವರ. ಜ್ವರ ಬಂದಿರುವುದು ಮಳೆಯಲ್ಲಿ ನೆಂದದ್ದಕ್ಕಾ ಅಥವಾ ಕುಂಡಿಯ ಮೇಲೆ ಬಾಸುಂಡೆ ಬಿದ್ದದ್ದಕ್ಕಾ ತಿಳಿಯಲಿಲ್ಲ ಅವಳಿಗೆ. ಎಂಥದೋ ಪಾಪಪ್ರಜ್ಞೆ ಕಾಡಿ ಅವಳನ್ನ ನೋಯಿಸಿತು. ಕ್ರೋಸಿನ್ ಮಾತ್ರೆ ನುಂಗಿಸಿ, ಗಂಡನಿಗೆ ಗಮನಿಸಲು ಹೇಳಿ ಬಂದು ಜೀರಿಗೆ ಕಷಾಯಕ್ಕಿಟ್ಟಳು. ಅವಳಿಗೆ ಈ ಬೇರು ಕಷಾಯಗಳಲ್ಲಿ ಅತೀವ ನಂಬಿಕೆ. ಮಾತ್ರೆಯಿಂದ ಗುಣವಾದರೂ ಕಷಾಯದ ಪರಿಣಾಮ ಎಂತಲೇ ನಂಬುವಂಥವಳು. ಅವಳಂತೂ ಎಂದೂ ಒಂದು ಮಾತ್ರೆ ನುಂಗಿದವಳಲ್ಲ. ಅವಳು ಒಂದೇ ಒಂದು ಮಾತ್ರೆ ಅಂತ ನುಂಗಿ ಅದೆಷ್ಟು ವರ್ಷಗಳಾಗಿವೆಯೋ. ಸುಸ್ವರ ಹೊಟ್ಟೆಯಲ್ಲಿದ್ದಾಗ ಅನಿಸುತ್ತದೆ ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು, ಅದೂ ತನ್ನ ಮಗುವಿನ ಆರೋಗ್ಯಕ್ಕಾಗಿ ಅಂತ ನುಂಗಿದ್ದಳು. ಸುಸ್ವರನ ಆಗಮನದ ನಂತರ ತುರ್ತು ಸಂದರ್ಭಕ್ಕೆಂದು ಒಂದೆರೆಡು ಮಾತ್ರೆ ಎತ್ತಿಟ್ಟಿರುತ್ತಾಳಷ್ಟೇ. ಜೀರಿಗೆ ಬೇಯುತ್ತಾ ನಿಧಾನವಾಗಿ ಬಣ್ಣ ಬಿಟ್ಟುಕೊಳ್ಳತೊಡಗಿತ್ತು. ಚೂರೇ ಚೂರು ಹಸಿರು